**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1418/2023**

**ಸಾಕ್ಷಿಃ ಸಿಡಬ್ಲ್ಯೂಃ 1, ಪಿ.ಡಬ್ಲ್ಯೂಃ 4**

| | |
|---|---|
| ಸಾಕ್ಷಿದಾರನ ಹೆಸರು | : ಹೆಚ್ ಬಿ ಕುಡಗುಂಟಿ |
| ತಂದೆಯ ಹೆಸರು | : ಬಸಪ್ಪ ಕುಡಗುಂಟಿ |
| ವಯಸ್ಸು | : 57 ವರ್ಷ |
| ಉದ್ಯೋಗ | : ಪಿಎಸ್ಐ , ಮುಂಡಗೋಡ ಪೋಲಿಸ ಠಾಣೆ |
| ವಾಸ್ತವ್ಯ | : ಬೃಂದಾವನ ಲೇ ಔಟ್ , ಮುಂಡಗೋಡ |

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 23/04 /2025**

**ಮುಖ್ಯ ವಿಚಾರಣೆ : ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ದಿನಾಂಕಃ 08.09.2019 ರಿಂದ ದಿನಾಂಕಃ 31.01.2023 ರವರೆಗೆ ಭಟ್ಕಳ ಶಹರ ಪೋಲಿಸ ಠಾಣೆಯಲ್ಲಿ ಕಾರ್ಯನಿರ್ವಹಿಸಿರುತ್ತೇನೆ.

2. ದಿಃ 31.03.2021 ರಂದು ಡೆಪ್ಯೂಟಿ ಡೈರೆಕ್ಟರ್ , ಲಕ್ನೊ ಇವರ ಪತ್ರದಂತೆ ಹಾಗೂ ವೃತ್ತ ನಿರೀಕ್ಷಕರ ಪತ್ರ ಹಾಗೂ ಎಸ್ ಪಿ ರವರ ಪತ್ರದ ಪ್ರಕಾರ ಸದರಿ ಆರೋಪಿತನು ದಿಃ 19.02.2021 ರಂದು ಸುಮಾರು ರೂ. 45,64, 296 ಮೌಲ್ಯದ ಸುಮಾರು 933 .12 ಗ್ರಾಮ ಚಿನ್ನ ಸಾಗಾಟ ಮಾಡುತ್ತಿರುವಾಗ ಲಕ್ನೊ ಕಸ್ಟಮ್ ಅಧಿಕಾರಿಗಳು ಅವುಗಳನ್ನು ವಶಪಡಿಸಿಕೊಂಡಿದ್ದು ಹಾಗೂ ಆತನ ಹತ್ತಿರ ಇರುವ ನಕಲಿ ಆದಾರ ಕಾರ್ಡ ಹಾಗೂ ಡ್ರೈವಿಂಗ್ ಲೈಸನ್ಸ ಹಾಗೂ ಪಾಸ್ ಪೋರ್ಟ ಇದ್ದುದನ್ನು ಪರಿಶೀಲನೆ ಮಾಡಿ ಮುಂದಿನ ಕ್ರಮಕ್ಕಾಗಿ ಎಸ್ ಪಿ ರವರಿಗೆ ಪತ್ರ ಮೂಲಕ ವರದಿ ನಿವೇದಿಸಿಕೊಂಡಿದ್ದು ನಂತರ ಎಸ್ ಪಿ ರವರು ಸಿಪಿಐ ಭಟ್ಕಳರವರಿಗೆ ಪ್ರಕರಣದ ಬಗ್ಗೆ ಮಾಹಿತಿ ನೀಡುವಂತೆ ಇ ಮೇಲ್ ಮೂಲಕ ಹೇಳಿದ್ದರಿಂದ ನಾನು ಸದರಿ ಆರೋಪಿತನ ವಿರುದ್ದ ದೂರನ್ನು ಚಾಸಾ –13 ರವರಿಗೆ ನೀಡಿದ್ದು ಇರುತ್ತದೆ.

3. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–1 ಎಂದು , ಸಾಕ್ಷಿಯ ಸಹಿಯನ್ನು ನಿಪಿ– 1 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎನ್ ಇ ಹೆಚ್ ವಕೀಲರಿಂದ,**

ಸದರಿ ಪ್ರಕರಣದ ಘಟನೆಯು ಉತ್ತರ ಪ್ರದೇಶದ ಲಕ್ನೊದಲ್ಲಿ ದಿಃ 01.01.2021ರಂದು ನಡೆದಿರುತ್ತದೆ. ಈ ಬಗ್ಗೆ ಪಿರ್ಯಾದನ್ನು ನಾನು ದಿಃ 31.03.2021ರಂದು ನೀಡಿರುತ್ತೇನೆ. ಸದರಿ ಪ್ರಕರಣದ ಕೃತ್ಯದ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ. ಆದರೆ ನನಗೆ ನಮ್ಮ ಸಿಪಿಐ ರವರು ಇ- ಮೇಲ್ ಮಾಹಿತಿ ಕಳುಹಿಸಿರುತ್ತಾರೆ. ಘಟನೆ ನಡೆದ ಸ್ಥಳಕ್ಕೆ ನಾನು ಭೇಟಿ ನೀಡಿಲ್ಲ. ಸದರಿ ಪ್ರಕರಣಕ್ಕೆ ಸಂಬಂಧಿಸಿ ಕೃತ್ಯ ನಡೆದ ಸ್ಥಳದಲ್ಲಿ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ. ನಕಲಿ ದಾಖಲಾತಿಗಳನ್ನು ನನ್ನ ಸಮಕ್ಷಮ ಜಪ್ತು ಮಾಡಿದ್ದು ಇರುವುದಿಲ್ಲ. ಸಾಮಾನ್ಯವಾಗಿ ಪಾಸ್ ಪೋರ್ಟ ಅನ್ನು ನೀಡಲು ಪ್ರತ್ಯೇಕವಾದ ಸಂಸ್ಥೆ ಇದೆ. ಪಾಸ್ ಪೋರ್ಟಅನ್ನು ನೀಡುವಾಗ ಅದಕ್ಕೆ ಬೇಕಾದ ದಾಖಲೆಗಳನ್ನು ಪರೀಶೀಲನೆ ಮಾಡಿ ನೀಡಿರುತ್ತಾರೆ. ಆದಾರ್ ಕಾರ್ಡ ಅನ್ನು ನೀಡಲು ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ ಸಂಸ್ಥೆ ಇದೆ. ಆದಾರ್ ಕಾರ್ಡ ಅನ್ನು ನೀಡುವಾಗ ಅದಕ್ಕೆ ಬೇಕಾದ ದಾಖಲೆಗಳನ್ನು ಪರೀಶೀಲನೆ ಮಾಡಿ ನೀಡಿರುತ್ತಾರೆ. ಯಾವುದೇ ವ್ಯಕ್ತಿಗೆ ವಾಹನ ಚಾಲನೆ ಪರವಾನಿಗೆ ನೀಡಲು ಖಚಿತವಾದ ಸಂಸ್ಥೆ ಇದೆ. ಅದಕ್ಕೆ ಬೇಕಾದ ದಾಖಲೆಗಳನ್ನು ಪರೀಶೀಲನೆ ಮಾಡಿ ಪರವಾನಿಗೆ ನೀಡಿರುತ್ತಾರೆ. ಯಾವುದೇ ದಾಖಲೆಯು ನಕಲು ಆಗಿದ್ದರೆ ಅದನ್ನು ಸಂಬಂಧಿಸಿದ ಪ್ರಯೋಗಾಲಯಕ್ಕೆ ಕಳುಹಿಸಿ ಪರಿಶೀಲನೆ ಮಾಡಬೇಕಾಗುತ್ತದೆ ಎಂದರೆ ಸರಿ. ನಾವು ಸಾಧಿಸುವ ನಕಲಿ ದಾಖಲೆಗಳನ್ನು ನಕಲಿ ಇವೆ ಎಂದು ನನ್ನ ಸಮಕ್ಷಮ ಪರಿಶೀಲನೆ ಮಾಡಿರುವುದಿಲ್ಲ. ಸದರಿ ಪ್ರಕರಣದಲ್ಲಿ ನನಗೆ ಯಾವುದೇ ಅಧಿಕಾರ ಇಲ್ಲದಿದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಅಂಕೆ ಸಂಕೆಗಾಗಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಯಾವುದೇ ಕೃತ್ಯ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಸಾಧಿಸುವ ವಿಷಯಕ್ಕೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ಓ.ಹೇ.ಕೇ. ಸರಿ ಇದೆ .**

ಸಹಿ ಇದೆ

**ಪ್ರ.ದ.ನ್ಯಾ.ದಂ., ಭಟ್ಕಳ**